ಶ್ರೀ ಮಾಲಿ ಮರಿಯಪ್ಪ.—ಅರ್ಬಿಟ್ರೇಷನ್ ಕೇಸ್ ಫೈಲ್ ಆಗಿದೆ, ಇಲಾಖೆಯಿಂದ ಲೆಕ್ಕಗಳು ಆಡಿಟ್ ಪೂರ್ತಿ ಆದಮೇಲೆ ಕ್ರಿಮಿನಲ್ ಕೇಸ್‌ಹಾಕಿ ಎಂದು ಹೇಳಿದ್ದಾರೆ.

ಶ್ರೀ ಜಿ. ಎನ್. ಪುಟ್ಟಣ್ಣ.— ಕ್ರಿಮಿನಲ್ ಕೇಸ್ ಹಾಕಬೇಕೆಂದು ಹೇಳಿ ಎಷ್ಟು ದಿನವಾಯಿತು ?

ಶ್ರೀ ಮಾಲಿ ಮರಿಯಪ್ಪ.—ತಾರೀಕು ಗೊತ್ತಿಲ್ಲ, ಸುಮಾರು ಆರು ತಿಂಗಳಾಗಿರಬಹುದು.

ಶ್ರೀ ಜಿ. ಎನ್. ಪುಟ್ಟಣ್ಣ.—ಆರು ತಿಂಗಳಾದರೂ ಇನ್ನು ಹಾಕಬೇಯಿರುವುದು ಸರ್ಕಾರದ ಅಲಕ್ಷ್ಯದಿಂದ ಎಂದು ಒಪ್ಪುತ್ತೀರಾ ?

ಶ್ರೀ ಮಾಲಿ ಮರಿಯಪ್ಪ.— Original records ಕೇಂದ್ರ ಕಛೇರಿಯಲ್ಲಿರುತ್ತವೆ; ಅವು ವಾಪಸು ಬಂದಮೇಲೆ ಮುಂದಿನ ಕ್ರಮ ಕೈಗೊಳ್ಳಬೇಕು.

ಶ್ರೀ ಜಿ. ಎನ್. ಪುಟ್ಟಣ್ಣ.—ಎಫಿಷಿಯೆನ್ಸಿ ಆಡಿಟ್, ಆ್ಯಂಟಿಕರಪ್ಷನ್ ಇಲಾಖೆಯವರು ಇವರಮೇಲೆ ಕ್ರಮ ತೆಗೆದುಕೊಳ್ಳಲು ಅವಕಾಶ ಕೊಡದಿರಲು ಕಾರಣವೇನು ?

ಶ್ರೀ ಮಾಲಿ ಮರಿಯಪ್ಪ.—ನಿಬಂಧನೆಗಳ ಪ್ರಕಾರ ಮೊದಲು ಇಲಾಖೆಯವರು ತನಿಖೆ ನಡೆಸಬೇಕಾಗುತ್ತದೆ.

ಶ್ರೀ ಜಿ. ಎನ್. ಪುಟ್ಟಣ್ಣ.—ತುಮಕೂರು ಜಿಲ್ಲೆಯಲ್ಲಿ 66 ಸೊಸೈಟಿಗಳು ಮುಳುಗಿ ಹೋಗಿವೆ. ತನಿಖೆ ನಡೆಸಲು Efficiency Audit and Anti-Corruption ಇಲಾಖೆಗೆ ಏಕೆ ವಹಿಸುವಾರದು ?

Sri MALI MARIYAPPA.—That is only a suggestion which can be considered in due course.

1-30 P M.

APPLICATIONS FOR REGISTRATION OF A SERVICE CO-OPERATIVE SOCIETY IN HEBBIRI VILLAGE GROUP PACHAYAT.

*Q.—742. Sri J. VENKATAPPA (Sidlaghatta).—

Will the Government be pleased to state :—

(*a*) the number of applications that have been received by the Government requesting for permission to register a Service Co-operative Society in Hebbiri Village Group Panchayat and the dates on which those applications were received;

(*b*) out of them, which was preferred by Government and the reasons for it?

*A.—Sri MALI MARIYAPPA (Minister for Co-operation).—

(*a*) Nil.

(*b*) Does not arise in view of reply to (*a*).

ಶ್ರೀ ಜಿ. ವೆಂಕಟಪ್ಪ.—(*a*)ಗೆ ಉತ್ತರವಾಗಿ ಅರ್ಜಿಗಳು ಯಾವುವು ಬಂದಿಲ್ಲ ಎಂದು ತಿಳಿಸಿದ್ದೀರಿ. ಅಸಿಸ್ಟೆಂಟ್ ರಿಜಿಸ್ಟ್ರಾರವರು ಅರ್ಜಿಗಳನ್ನು ರಿಜಿಸ್ಟರ್ ಮಾಡಿಕೊಂಡು ಈಗಾಗಲೇ ಆರ್ಡರ್ ಆಗಿದೆ. ಹೀಗಿರುವಾಗ ಸಹ ಅರ್ಜಿಗಳು ಬಂದಿಲ್ಲ ಎಂದು ಹೇಳಲು ಕಾರಣವೇನು ?

†ಶ್ರೀ ಮಾಲ ಮರಿಯಪ್ಪ.—ಕ್ಷೇತ್ರದ ಫ್ರೇಮ್ ಮಾಡಿದ್ದಾರಲ್ಲಿ ಹೆಬ್ಬೇರಿ ಗ್ರಾಮ ಸಮುದಾಯದ ಪಂಚಾಯಿತಿಯಲ್ಲಿರುವ ಸ್ವಂತ ಸಹಕಾರೀ ಸಂಘವೊಂದನ್ನು ರಿಜಿಸ್ಟರ್ ಮಾಡಲು ಸರ್ಕಾರದವರ ಅನುಮತಿ ಕೇಳುವ ಎಷ್ಟು ಅರ್ಜಿಗಳು ಬಂದಿವೆ ಎಂದು ಕೇಳಿರುವುದರಿಂದ ಹಾಗೆ ಉತ್ತರ ಕೊಟ್ಟಿದೆ. ಆಕ್ಚುಯಲ್ ಎರಡು ಅಪ್ಲಿಕೇಷನ್‌ಗಳು ಬಂದಿವೆ. ಅದರಲ್ಲಿ ಒಂದು ಅಸಿಸ್ಟೆಂಟ್ ರಿಜಿಸ್ಟ್ರಾರವರಿಂದ ಬಂದಿದೆ. ಇನ್ನೊಂದು ಕೋ-ಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರಿಂದ ಬಂದಿದೆ.

ಶ್ರೀ ಜೆ. ವೆಂಕಟಪ್ಪ.—ಅವು ಯಾವ ಯಾವ ತಾರೀಖಿನಲ್ಲಿ ಬಂದಿವೆ ?

ಶ್ರೀ ಮಾಲ ಮರಿಯಪ್ಪ.— 1—8—1960 ರಲ್ಲಿ ಒಂದು ಅರ್ಜಿ ಬಂದಿದೆ. ಮತ್ತು 1—9—1960 ರಲ್ಲಿ ಇನ್ನೊಂದು ಅರ್ಜಿ ಬಂದಿದೆ.

ಶ್ರೀ ಜೆ. ವೆಂಕಟಪ್ಪ.—ಅದರಲ್ಲಿ ಯಾವ ಪರ್ಸೆಂಟೇಜ್‌ನ್ನು ಕನ್‌ಸಿಡರ್ ಮಾಡುತ್ತೀರಿ?

ಶ್ರೀ ಮಾಲ ಮರಿಯಪ್ಪ.—ಇಮ್ಮಡಿಪಾಳ್ಯದ ಸುಮಾರು 176 ಷೇರ್ ಹೋಲ್ಡರುಗಳು, ಮೂರು ಸಾವಿರ ರೂಪಾಯಿ ಷೇರ್ ಡಿವಾಜಿಟ್ ಬಂದಿದೆ. ಹೆಬ್ಬೇರಿಗ್ರಾಮದಿಂದ 110 ಜನ ಷೇರ್ ಹೋಲ್ಡರುಗಳು 1,200 ರೂಪಾಯಿ ಷೇರ್ ಡಿವಾಜಿಟ್ ಬಂದಿದೆ. ಇಮ್ಮಡಿಪಾಳ್ಯದಲ್ಲಿ ಹೆಚ್ಚು ಜನ ವ್ಯವಸಾಯಗಾರರಿಂದ ಹೆಚ್ಚು ಪೊತ್ತನ್ನು ಕಲೆಕ್ಟ್ ಮಾಡಿರುವುದರಿಂದ ಅದನ್ನು ರಿಜಿಸ್ಟರ್ ಮಾಡಬೇಕೆಂಡಿದ್ದೇವೆ.

ಶ್ರೀ ಜೆ. ವೆಂಕಟಪ್ಪ.—ಹೆಚ್ಚು ಪೊತ್ತು ಬಂದರೆ ರಿಜಿಸ್ಟರ್ ಮಾಡಬೇಕೆಂದು ಆಧಾರವನ್ನು ಇಟ್ಟುಕೊಂಡಿದ್ದೀರಾ ?

ಶ್ರೀ ಮಾಲ ಮರಿಯಪ್ಪ.—ಈ ಒಂದು ನಿರ್ದಿಷ್ಟದಲ್ಲಿ ಏನಾಗಿದೆ ಎಂದರೆ ಒಂದೇ ಗ್ರೂಪ್ ಪಂಚಾಯಿತಿಯಲ್ಲಿ ಎರಡು ಅಪ್ಲಿಕೇಶನ್ ಕೊಟ್ಟರೆ ಎಲ್ಲಿ ಜನಗಳಲ್ಲಿ ಹೆಚ್ಚು ಉತ್ಸಾಹವಿದೆಯೋ ಎಲ್ಲಿ ಹೆಚ್ಚು ಷೇರ್ ಅಮೌಂಟ್ ಕಲೆಕ್ಟ್ ಮಾಡಿದ್ದಾರೋ ಅಲ್ಲಿ ರಿಜಿಸ್ಟರ್ ಮಾಡಬೇಕೆಂದು ಲೋಕರ್ ಆಫೀಸರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಜಿ. ವೆಂಕಟಪ್ಪ.—ಹೆಬ್ಬೇರಿ ಗ್ರಾಮದವರಿಗೆ ಹೆಚ್ಚು ಉತ್ಸಾಹವಿದ್ದು ಅಸಿಸ್ಟೆಂಟ್ ರಿಜಿಸ್ಟ್ರಾರವರು ಲೋಕರ್ ಆಫೀಸರ್ ಮತ್ತು ಕಾಗಿರತಕ್ಕ ಕೋ-ಆಪರೇಟೀವ್ ಎಕ್ಸ್‌ಟೆನ್‌ಷನ್ ಆಫೀಸರೂ ರೆಕಮೆಂಡ್ ಮಾಡಿರುವ ಅರ್ಜಿಯನ್ನು ತಿರಸ್ಕರಿಸಲು ಕಾರಣವೇನು ?

ಶ್ರೀ ಮಾಲ ಮರಿಯಪ್ಪ.—ಅಸಿಸ್ಟೆಂಟ್ ರಿಜಿಸ್ಟ್ರಾರ್ ಆವರು ಎರಡು ರಿಪೋರ್ಟುಗಳನ್ನು ರಿಜಿಸ್ಟ್ರಾರ್ ಅವರಿಗೆ ಕಳುಹಿಸಿ ಅಂಕಿ ಅಂಶಗಳು ಈ ರೀತಿ ಇದೆ, ಎರಡು ಕಡೆಯೂ ಷೇರ್ ಅಮೌಂಟ್‌ನ್ನು ಕಲೆಕ್ಟ್ ಮಾಡಿದ್ದಾರೆ, ಇದರ ಪೈಕಿ ಯಾವುದನ್ನು ಮಾಡಬೇಕು ಎಂದು ರಿಜಿಸ್ಟ್ರಾರವರ ಇನ್‌ಸ್ಟ್ರಕ್ಷನ್ ಕೇಳಿದ ಮೇಲೆ, ಅವರು ಎಲ್ಲಿ ಹೆಚ್ಚು ಉತ್ಸಾಹ ವಿದೆಯೋ ಅಲ್ಲ ಮಾಡಿ ಎಂದು ಹೇಳಿದ್ದಾರೆ.

ಶ್ರೀ ಜೆ. ವೆಂಕಟಪ್ಪ.—ಹೆಬ್ಬೇರಿ ಗ್ರಾಮವು ಪೆಡ್‌ಕ್ವಾರ್ಟರ್ಸ್, ಪ್ರಮೋಟರ್ಸ್ ರಾಜಕೀಯದಲ್ಲಿ ನಿಮ್ಮಿಂದ ದೂರವಾಗಿದ್ದಾರೆ. ಆದ್ದರಿಂದ ಅವರಿಗೆ ಪ್ರೋತ್ಸಾಹ ಕೂಡ ಕೂಡದು ಎನ್ನುವ ದುರುದ್ದೇಶದಿಂದ ಮಾಡಿದ್ದಲ್ಲವೇ ?

ಶ್ರೀ ಮಾಲ ಮರಿಯಪ್ಪ.—ಇಲ್ಲ. ಅದು ಸರಿಯಾದ ಊಹೆಯಲ್ಲ.